◆ **ನಿಮ್ಮ ಹೊಸ ಪುಸ್ತಕ, 'ಅಂಬೇಡ್ಕರ್ಸ್ ಪೊಲಿಟಿಕಲ್ ಫಿಲಾಸಫಿ: ಎ ಗ್ರಾಮರ್ ಆಫ್ ಪಬ್ಲಿಕ್ ಲೈಫ್ ಫ್ರಮ್ ದ ಮಾರ್ಜಿನ್ಸ್' ಪ್ರಕಟವಾಗಿದೆ. ಈ ಪುಸ್ತಕ ರೂಪುಗೊಳ್ಳಲು ಒಂದು ದಶಕಕ್ಕೂ ಹೆಚ್ಚು ಕಾಲ ತೆಗೆದುಕೊಂಡಿದೆಯೆಂದು ನಾವು ಮೂರು ವರ್ಷಗಳ ಹಿಂದೆ ಭೇಟಿಯಾಗಿದ್ದಾಗ ಹೇಳಿದ್ದಿರಿ. ಆ ಸುದೀರ್ಘ ಪಯಣದ ಬಗ್ಗೆ ನಿಮ್ಮ ಅನುಭವಗಳು, ಒಳನೋಟಗಳನ್ನು ಹಂಚಿಕೊಳ್ಳುವಿರಾ? ಯಾವ ಪ್ರಮುಖ ಸವಾಲುಗಳು ಅಥವಾ ವಿಚಾರಗಳು ಅದರ ವಿಸ್ತೃತ ಬೆಳವಣಿಗೆಯ ಮೇಲೆ ಪ್ರಭಾವ ಬೀರಿವೆ? ಅಲ್ಲದೆ, ಇಪ್ಪತ್ತೊಂದನೇ ಶತಮಾನದಲ್ಲಿ ಅಂಬೇಡ್ಕರ್‌ರವರ ರಾಜಕೀಯ ಚಿಂತನೆಯು ಹೆಚ್ಚೆಚ್ಚು ವಿದ್ವಾಂಸರ ಗಮನವನ್ನು ಸೆಳೆಯುತ್ತಲೇ ಇದೆ. ಆ ದೃಷ್ಟಿಯಿಂದ ನಿಮ್ಮ ಪುಸ್ತಕದ ಉಪಶೀರ್ಷಿಕೆ ಕೂಡ ಭಿನ್ನವಾಗಿ ಎದ್ದು ಕಾಣುತ್ತದೆ. ಅದಕ್ಕೆ ಪ್ರೇರಣೆಯೇನು?**



ಪುಸ್ತಕದ ರಚನೆಯನ್ನು ರೂಪಿಸಲು ನನಗೆ ಸ್ವಲ್ಪ ಸಮಯ ಹಿಡಿಯಿತು. ಎರಡು ಸವಾಲುಗಳು ಎದುರಾದವು. ಮೊದಲನೆಯ ಸವಾಲು, 1980ರ ದಶಕದ ಆರಂಭದ ವೇಳೆಗೆ, ಕ್ರಿಟಿಕಲ್ ಥಿಯರಿಯು ಟ್ರಾನ್ಸ್‌ಅಟ್ಲಾಂಟಿಕ್ ಜಗತ್ತಿನಲ್ಲಿ ರೂಪಿತವಾದ, ಎಲ್ಲೆಡೆ ಮಾನ್ಯವಾಗಿರುವ, ಏಕೀಕೃತ ಜ್ಞಾನ ಎಂಬ ಪರಿಕಲ್ಪನೆಯನ್ನು ತಿರಸ್ಕರಿಸಿತು. ಅಲ್ಲದೆ, ಅಂತಹ ಯಾವುದೇ ಕ್ಲೇಮ್ ಅನ್ನು ಜ್ಞಾನಶಾಸ್ತ್ರೀಯ ದಾಸ್ಯ ಎಂಬಂತೆ ನೋಡಲಾಗುತ್ತಿತ್ತು. ಮಾರ್ಕ್ಸ್‌ವಾದವು ವಿಮೋಚನೆಯ ಜಾಗತಿಕ ಸಿದ್ಧಾಂತವಾಗಿ ತನ್ನನ್ನು ತಾನು ಸಮರ್ಪಿಸಿಕೊಂಡಿದೆಯೆಂಬ ತಿಳಿವಳಿಕೆಯೊಂದಿಗೆಯೇ ಅಲ್ಲಿಯವರೆಗೆ ಕೆಲಸ ಮಾಡುತ್ತಿದ್ದ ನನಗೆ, ಸಿದ್ಧಾಂತದ ಕೇಂದ್ರವನ್ನೇ ಮುರಿಯಬೇಕೆಂಬ ಕರೆಯು ಜಗತ್ತಿನೊಂದಿಗೆ ಗುದ್ದಾಡುವ ನನ್ನ ವಿಧಾನದ ಮೇಲೆ ನಡೆದ ನೇರ ದಾಳಿಯಾಗಿತ್ತು. ಆದರೆ, ನಿಜವಾದ ಸವಾಲು ಯಾವುದಾಗಿತ್ತೆಂದರೆ, ನನ್ನನ್ನು ನಾನು ಜ್ಞಾನಮೀಮಾಂಸೆಯಲ್ಲಿ ಹೇಗೆ ಮರು ರೂಪಿಸಿಕೊಳ್ಳಬೇಕೆಂಬುದು. ಆ ನಿಟ್ಟಿನಲ್ಲಿ ಎಡ್ವರ್ಡ್ ಸೈದ್ ಅವರ 'ಓರಿಯಂಟಲಿಸಂ,' ತಪನ್ ರಾಯ್ ಚೌಧರಿ ಅವರ 'ಯುರೋಪ್ ರೀಕನ್ಸಿಡರ್ಡ್' ಕೃತಿಗಳು ಹಾಗೂ ನಮ್ಮ ತಿಳಿವಳಿಕೆಯ ವಿಧಾನದಲ್ಲಿ 'ಸಾಮ್ಯತೆ'ಗಿಂತ 'ಭೇದ'ದೆಡೆ ಹೆಚ್ಚು ಗಮನಹರಿಸಬೇಕೆಂದು ಹೇಳಿ ಕೊಟ್ಟ ನನ್ನ ಗುರುಗಳಾದ ಸುದೀಪ್ತ ಕವಿರಾಜ್ ದಾರಿ ತೋರಿದ್ದುಂಟು. ಆ ಹೊತ್ತಿಗೆ, ಗಾಂಧಿಯವರು ಪಾಶ್ಚಾತ್ಯ ಜ್ಞಾನಮೀಮಾಂಸೆಯ ಪ್ರಾಬಲ್ಯವನ್ನು ಹೇಗೆ ಪ್ರಶ್ನಿಸಿದರು ಎಂಬುದನ್ನು ತೋರಿಸಿಕೊಡುವ ಆಸಕ್ತಿದಾಯಕ ಅಧ್ಯಯನಗಳು ಕೂಡ ಬಂದಿದ್ದವು.

ನಾನು 1980ರ ದಶಕದ ಆರಂಭದಲ್ಲಿ ನನ್ನ ಪಿಎಚ್.ಡಿ ಪೂರ್ಣಗೊಳಿಸಿದೆ. ಆಗ ನನ್ನ ಭವಿಷ್ಯದ ಬೌದ್ಧಿಕ ಅನ್ವೇಷಣೆಯನ್ನು ಅಂತಹ 'ಭೇದ'ವನ್ನು ತನ್ನ ಚಿಂತನಾಕ್ರಮದಲ್ಲಿ ಅಳವಡಿಸಿಕೊಂಡ, ಆದರೆ ಆಧುನಿಕ ಜ್ಞಾನಮೀಮಾಂಸೆಯಲ್ಲಿ ನೆಲೆ ಕಂಡಿರುವ ಚಿಂತಕರೊಬ್ಬರ ಮೇಲೆ ತೊಡಗಿಸಿಕೊಳ್ಳುವುದು ಮುಖ್ಯವೆಂದೆನಿಸಿತು. ಅಂತಹ ಭೇದವು ಕೇವಲ ಜ್ಞಾನಮೀಮಾಂಸೆಗೆ ಸೀಮಿತವಾಗಿರಬಾರದು, ಅದು ನೈತಿಕವೂ ಆಗಿರಬೇಕು ಎಂಬುದು ನನ್ನ ಮತ್ತೊಂದು ಕಾಳಜಿಯಾಗಿತ್ತು. ಆ ಪ್ರಕ್ರಿಯೆಯಲ್ಲಿ ನಾನು ಅಂಬೇಡ್ಕರ್‌ರವರನ್ನು ಕಂಡುಕೊಂಡೆ. ಮಾರ್ಕ್ಸ್ ನಂತರ ನಾನು ಅವರನ್ನು ಓದಿದ್ದರಿಂದಾಗಿ ಅಂಬೇಡ್ಕರ್‌ರವರಲ್ಲಿ ನನ್ನ ರಾಜಕೀಯ ಮತ್ತು ನೈತಿಕ ಸಹಾನುಭೂತಿಗಳು ಕೂಡ ಮಿಳಿತವಾಗಿದ್ದವು. 1990ರ ದಶಕದ ಆರಂಭದಿಂದ 2010ರ ದಶಕದವರೆಗೆ ಅಂಬೇಡ್ಕರ್‌ರವರಿಗೆ ಸಂಬಂಧಿಸಿದಂತೆ ನಾನು ಮಾಡಿದ ಕೆಲಸವು ಮೂಲಭೂತವಾಗಿ ಒಂದು ವೇದಿಕೆ ಕಟ್ಟುವ ಕೆಲಸವಾಗಿತ್ತು. ಏಕೆಂದರೆ, ನಾನು ಭಾರತೀಯ ರಾಜಕೀಯ ಚಿಂತನೆಯ ಮಸೂರದ ಮೂಲಕ